ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವೆ).—

ಅ, ಮೂಡಿಗೆರೆ ತಾಲ್ಲೂಕ್ ಬಣಕಲ್‌ನಲ್ಲಿ ಒಂದು ವಿದ್ಯಾರ್ಥಿನಿಲಯ ಮಂಜೂರಾಗಿದ್ದು ಈ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗಿದೆ. ತರೀಕೆರೆ ತಾಲ್ಲೂಕ್ ಲಕ್ಕವಳ್ಳಿಯಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ವಿದ್ಯಾರ್ಥಿನಿಲಯ ಈ ವರ್ಷ ಮಂಜೂರುಮಾಡಲಾಗಿದೆ ಈ ನಿಲಯವನ್ನು ಪ್ರಾರಂಭಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ, ಉದ್ಭವಿಸುವುದಿಲ್ಲ.

ಶ್ರೀ ಪಿ. ತಿಪ್ಪಯ್ಯ.— ಮಾನ್ಯ ಅಧ್ಯಕ್ಷರೇ ತರೀಕೆರೆ ತಾಲ್ಲೂಕ್ ಲಕ್ಕವಳ್ಳಿಯಲ್ಲಿ ಒಂದು ಹರಿಜನ ಗಿರಿಜನ ವರ್ಗದ ವಿದ್ಯಾರ್ಥಿನಿಲಯವನ್ನು ತೆರೆಯಲು ಸರ್ಕಾರದವರು ಹಿಂದೆಯೇ ಆದೇಶ ನೀಡಿದ್ದರೂ. ನನಗೆ ತಿಳಿದಮಟ್ಟಿಗೆ 1983–84ರಲ್ಲಿಯೇ ಇದು ಪ್ರಾರಂಭವಾಗಬೇಕಾಗಿತ್ತು ಆದರೆ ಕೆಲವು ಅಧಿಕಾರಿಗಳ ವಿಳಂಬತನದಿಂದಾಗಿ ಇನ್ನೂ ಕೂಡ ಪ್ರಾರಂಭವಾಗಿಲ್ಲ. ಇದು ತಮ್ಮ ಗಮನಕ್ಕೆ ಬಂದಿರುತ್ತದೆಯೇ ? ಎರಡನೆಯದಾಗಿ ಇಲ್ಲಿ ಪರಿಶಿಷ್ಟವರ್ಗ ಜನ ಜಾಸ್ತಿ ಇದ್ದಾರೆ. ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಕೂಡಲೇ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಮೂಡಿಗೆರೆ ತಾಲ್ಲೂಕಿನಲ್ಲಿ ಪರಿಶಿಷ್ಟಜಾತಿ ವರ್ಗದವರಿಗೆ ಹಾಸ್ಟೆಲ್‌ಗಳನ್ನು ತೆಗೆಯಲು ಇತ್ತೀಚೆಗೆ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. 1982–83ನೇ ಸಾಲಿಗೆ ಮೂಡಿಗೆರೆ ತಾಲ್ಲೂಕಿನಲ್ಲಿ ಪರಿಶಿಷ್ಟವರ್ಗದವರಿಗೆ ಮೆಟ್ರಿಕ್ ಪೂರ್ವ ಪ್ರಾಥಮಿಕ ಬಾಲಕ ಶಾಲೆಗಳನ್ನು ತೆರೆಯಲಾಗಿದೆ. 16–3–84ರಿಂದ ಈಚೆಗೆ ಮೆಟ್ರಿಕ್ ಪೂರ್ವ ಪ್ರಾಥಮಿಕ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡುವುದಕ್ಕೂ ಮತ್ತು ಹೊಸದಾಗಿ ಪರಿಶಿಷ್ಟ ಮತ್ತು ನಿಮ್ನವರ್ಗದ ಹೆಣ್ಣುಮಕ್ಕಳಿಗೂ ವಿದ್ಯಾರ್ಥಿನಿಲಯಗಳನ್ನು ತೆಗೆಯಲು ಈಗತಾನೆ ಸರ್ಕಾರ ಒಂದು ಆದೇಶವನ್ನು ಹೊರಡಿಸಿದೆ. ಕೆಲವಾರು ದಿನಗಳಲ್ಲಿಯೇ ಪ್ರಾರಂಭಮಾಡಲಾಗುತ್ತದೆ. ಒಟ್ಟಿನಲ್ಲಿ ಈ ರಾಜ್ಯದಲ್ಲಿ 100 ಮೆಟ್ರಿಕ್ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಹಿಂದುಳಿದ ಪಂಗಡದವರಿಗೂ ಹಾಸ್ಟೆಲ್‌ಗಳನ್ನು ಮಾಡಬೇಕೆಂದೂ ಕೂಡ ಇದ್ದೇವೆ. ಆಡಳಿತಾತ್ಮಕವಾಗಿ ತೊಂದರೆ ಇರುವುದರಿಂದ ನಿಧಾನವಾಗಿದೆ, ಇನ್ನು ಕೆಲವೇ ದಿವಸಗಳಲ್ಲಿ ಪ್ರಾರಂಭಿಸಲಾಗುತ್ತದೆ.

ವಿಷಯ : ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲನೆಯ ಹಂತ

ಪ್ರ. ಸಂಖ್ಯೆ 672 (1716) ಶ್ರೀ ಎಸ್. ಎಸ್. ಕಡಪಟ್ಟಿ (ಹುನುಗುಂದ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲನೇ ಘಟ್ಟಕ್ಕಾಗಿ ಒಂದು ವರ್ಷಕ್ಕೆ 52 ಕೋಟಿ ರೂಪಾಯಿಗಳನ್ನು ಸರ್ಕಾರವು ನಿಗದಿ ಮಾಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ, ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೇ ಘಟ್ಟವನ್ನು ಸರ್ಕಾರವು ಯಾವಾಗ ತೆಗೆದುಕೊಳ್ಳುತ್ತದೆ ಮತ್ತು ಸಂಪೂರ್ಣ ಯೋಜನೆಯು ಎಂದು ಪೂರ್ಣಗೊಳ್ಳುವುದು :

ಇ) ಕೃಷ್ಣ ಗೋದಾವರಿ ಆಯೋಗದವರು ನಿಗದಿಪಡಿಸಿದ ನೀರಿನ ಪ್ರಮಾಣವನ್ನು ಸರ್ಕಾರವು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದೆ.ಮತ್ತು ಸದಾ ಕ್ಷಾಮಪೀಡಿತವಾದ ಗುಲ್ಬರ್ಗ, ರಾಯಚೂರು ಬಿಜಾಪುರ ಜಿಲ್ಲೆಗಳಿಗೆ ಕ್ರಿ. ಶ. 2000 ಇಸವಿಯೊಳಗೆ ಸಹಾಯವನ್ನೊದಗಿಸಲು ಉದ್ದೇಶಿಸಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) 1984-85ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಈ ಯೋಜನೆಗೆ 52.11 ಕೋಟಿ ರೂಪಾಯಿಗಳನ್ನು ನಿಗದಿಮಾಡಿದೆ.

ಆ) ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲನೇ ಘಟ್ಟವು ಪೂರ್ಣಗೊಂಡ ನಂತರ ಎರಡನೇ ಘಟ್ಟವನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಇ) ಹೌದು.

(ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.— ಶ್ರೀ ಎಸ್. ಎಸ್. ಕಡಪಟ್ಟಿಯವರ ಪರವಾಗಿ)

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.— ಮಾನ್ಯ ಅಧ್ಯಕ್ಷರೇ ಇಲ್ಲಿಯವರೆಗೆ ಈ ಯೋಜನೆಗೆ ಒಟ್ಟು ಎಷ್ಟು ಮೊತ್ತ ಖರ್ಚಾಗಿದೆ. ಈ ಯೋಜನೆಯು ಹೀಗೆ ಆಮೆ ವೇಗದಲ್ಲಿ ನಡೆದರೆ ಇನ್ನು ಎಷ್ಟುವರ್ಷಗಳಲ್ಲಿ ಈ ಯೋಜನೆಯು ಮುಗಿಯಬಹುದು ?

ಶ್ರೀ ಎಚ್. ಡಿ. ದೇವೇಗೌಡ.— ಈ ಯೋಜನೆಗೆ ಇಲ್ಲಿಯವರೆಗೆ ಖರ್ಚಾಗಿರುವುದು 270 ಕೋಟಿ ರೂಪಾಯಿಗಳು. ಮೊದಲನೆಯ ಹಂತಕ್ಕೆ ಬೇಕಾಗಿರತಕ್ಕಂಥ ಒಟ್ಟು ಹಣ 440 ಕೋಟಿ ರೂಪಾಯಿಗಳು. ಮೊದಲನೆ ಹಂತ ಪೂರ್ತಿ ಮುಗಿಸಬೇಕಾದರೆ 1050 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮತ್ತೆ ಮೊದಲನೆಯ ಹಂತವನ್ನು 1986ನೇ ಇಸವಿಗೆ ಮುಗಿಸತಕ್ಕಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.— 1050 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿರುವಾಗ ಈ ವರ್ಷ 50 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಅಲಾಟ್ ಮಾಡಿದರೆ ಇದು ಇನ್ನು ಎಷ್ಟು ವರ್ಷಕ್ಕೆ ಮುಗಿಯುತ್ತದೆ ? ಎರಡನೆಯದಾಗಿ ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳು ಬರಗಾಲ ಪೀಡಿತ ಪ್ರದೇಶಗಳೆಂದು ತಮಗೆ ಗೊತ್ತಿದೆ. ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಪ್ರಸಕ್ತ ಸಾಲಿನಲ್ಲಿಯೇ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.— ನನ್ಮಾನ್ಯ ಸದಸ್ಯರು ಹೇಳಿರತಕ್ಕಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಒಂದು ದೊಡ್ಡ ಪ್ರಮಾಣದ ಯೋಜನೆ ಇದಕ್ಕೆ 52 ಕೋಟಿ ರೂಪಾಯಿಗಳು ಅಷ್ಟೇ ಅಲ್ಲ ಇನ್ನೂ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಒದಗಿಸಬೇಕೆಂದು ಇದ್ದೇವೆ. ಫೈನಾನ್ಸ್ ಕಮಿಷನ್‌ನಿಂದ ಫಂಡ್ಸ್ ಬಂದಮೇಲೆ ಹೆಚ್ಚು ಹಣವನ್ನು ತೊಡಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಆದೇರೀತಿ ಸೆಕೆಂಡ್ ಸ್ಟೇಜಿಗೂ ಕೂಡ ವರ್ಲ್ಡ್‌ಬ್ಯಾಂಕ್‌ನಿಂದ ಹಣಸಹಾಯವನ್ನು ಪಡೆಯಲು ಪ್ರಯತ್ನ ಮಾಡಿ ಈ ಕೆಲಸವನ್ನು ಜರೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಷಯ : ಕೃಷ್ಣಾ ಹೊಳೆಯ ಅಡ್ಡಲಾಗಿ ಮಂಜರಿ ಊರ ಹತ್ತಿರ ಸೇತುವೆ ಕಟ್ಟುವ ಬಗ್ಗೆ

ಪ್ರಶ್ನೆ ಸಂಖ್ಯೆ. 673 (1270) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಬೆಳಗಾಂ ಜಿಲ್ಲೆಯ ಮಂಜರಿ ಗ್ರಾಮದ ಹತ್ತಿರ ಕೃಷ್ಣಾ ನದಿಯ ಮೇಲೆ ಸೇತುವೆ ನಿರ್ಮಾಣಕ್ಕೆ ಮಂಜೂರಾತಿ ನೀಡಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಸದರಿ ಸುತುವೆ ನಿರ್ಮಾಣಕ್ಕೆ ತಗಲುವ ಖರ್ಚು ಎಷ್ಟು ;

(ಇ) ಕೇಂದ್ರ ಸರ್ಕಾರದವರು ಈ ಸೇತುವೆಗೆ ಮಂಜೂರ್ಮಾಡಿರುವ ಹಣ ಎಷ್ಟು ;

(ಈ) ಸದರಿ ಸುತುವೆಯ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ.—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).

(ಅ) ಹೌದು.

(ಆ) ಸೇತುವೆಯ ಅಂದಾಜು ಮೊಬಲಗು 177 ಲಕ್ಷ ರೂ. ಗಳು.

(ಇ) 177 ಲಕ್ಷ ರೂಪಾಯಿಗಳು.

(ಈ) ಟಿಂಡರುಗಳನ್ನು ಕರೆಯಲಾಗಿದೆ. ಕಂಟ್ರಾಕ್ಟರನ್ನು ನಿರ್ಧರಿಸಿದ ಮೇಲೆ ಕೆಲಸವನ್ನು ಪ್ರಾರಂಭಿಸಲಾಗುವುದು.

ಶ್ರೀ ಎಂ. ಎಸ್ ಪಾಟೀಲ್.—ಈ ಸುತುವೆ ಕೆಲಸಕ್ಕೆ ಮಂಜೂರಾತಿ ಸಿಕ್ಕಿದ್ದು ಯಾವಾಗ ? ಇದನ್ನು ಯಾವ ಸ್ಥಳದಲ್ಲಿ ಕಟ್ಟಲಾಗುತ್ತದೆ ಹಾಗೂ ಕೇಂದ್ರದಿಂದ ಇದಕ್ಕೆ ಸಿಗುವ ಹಣವೆಷ್ಟು ಮತ್ತು ರಾಜ್ಯದ ಹಣವೆಷ್ಟು ಎಂಬುದನ್ನು ಹೇಳುತ್ತೀರಾ ? ಇಲ್ಲಿ ಟೆಂಡರುಗಳನ್ನು ಕರೆಯಲಾಗಿದೆ ಎಂದು ಹೇಳಿದ್ದೀರಿ. ಆದ್ದರಿಂದ ಕೆಲಸ ಯಾವಾಗ ಪ್ರಾರಂಭ ಮಾಡುತ್ತೀರಾ ಎಂಬುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಜೇವರ್ಗಿ ಮತ್ತು ಸಂಕೇಶ್ವರ ರೋಡ್ ಹತ್ತಿರ ಈ ಸೇತುವೆ ಬರುತ್ತದೆ. ಕೇಂದ್ರಸರ್ಕಾರದಿಂದ ಇದಕ್ಕೆ 180 ಲಕ್ಷ ರೂಪಾಯಿಗಳ ಸಹಾಯ ಸಿಕ್ಕಿದೆ. ಇದನ್ನು ನಮ್ಮ ಸರ್ಕಾರ ವಾಪಸ್ ಕೊಡಬೇಕಾಗುತ್ತದೆ. ಇದಕ್ಕೆ ಟೆಂಡರ್ ಹಾಕಿಕೊಳ್ಳಲು ಕೊನೆಯ ತಾ. 30ನೇ ಮೇ 1984. ನಂತರ ಯಾರು ಕಡಿಮೆ ದರ ಸೂಚಿಸುತ್ತಾರೋ ಅವರಿಗೆ ಕೆಲಸ ವಹಿಸಿ ತ್ವರಿತವಾಗಿ ಕೆಲಸ ಮಾಡಿಸುತ್ತೇವೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳಿಗೂ ಗೊತ್ತಿರುಮತೆ ಕೆಲವೊಂದು ಸೇತುವೆಗಳ ಕೆಲಸ ಗುಣಮಟ್ಟ ಚೆನ್ನಾಗಿಲ್ಲ. ಈ ಸೇತುವೆ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವಂತಹ ಒಂದು ಮಹತ್ವದ ಸೇತುವೆಯಾದ ಕಾರಣ ಇದರ ಒಂದು ಕ್ವಾಲಿಟಿ ಚೆನ್ನಾಗಿರುವಂತೆ ತಾವು ನೋಡಿಕೊಳ್ಳುತ್ತೀರಾ ?